ಓ.ಎಸ್: 403/2022

ಪಿ.ಡಬ್ಲ್ಯೂ: 01

**<u>ದಿನಾಂಕ: 04.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಮುಂದುವರೆದ ಪಾಟೀ ಸವಾಲು 1ನೇ ಪ್ರತಿವಾದಿಯ ಪರ ಶ್ರೀ ಸಿ.ಆರ್.ಎಸ್. ವಕೀಲರಿಂದ:</u>**

8. ನಮಗೆ ಹಣದ ಅಡಚಣೆ ಇರುವ ಕಾರಣ ಆಸ್ತಿಯನ್ನು ಒತ್ತಿಯಾಗಿ ಇಟ್ಟು ನೋಂದ ಮಾಡಿಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯಿಂದ 1,06,000/- ಹಣ ಪಡೆದುಕೊಂಡಿರುತ್ತೇವೆ. ಹಣವನ್ನು ನಗದಾಗಿ ನಾನೆ ಪಡೆದುಕೊಂಡಿರುತ್ತೇವೆ. ಯಾವ ದಿನಾಂಕ, ತಿಂಗಳು ವರ್ಷ ಹಣಪಡೆದುಕೊಂಡಿರುತ್ತೇವೆ ಎಂದು ಹೇಳಲು ಬರುವುದಿಲ್ಲ. ನನ್ನ ವಾದ ಪತ್ರ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ನೋಂದಣಿಯಾದ ದಿನಾಂಕ, ತಿಂಗಳು ವರ್ಷವನ್ನು ನಮೂದಿಸಿದ್ದು ಯಾವ ಆಧಾರದ ಮೇರೆಗೆ ನಮೂದಿಸಿರುತ್ತೀರಿ ಎಂದರೆ ಸಾಕ್ಷಿಯು ದಾಖಲಾತಿಯನ್ನು ಪಡೆದುಕೊಂಡು ಬಂದ ಮೇರೆಗೆ ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ನನ್ನ ಮಾವನವರು ತೆಗೆದುಕೊಂಡು ಬಂದಿರುತ್ತಾರೆ. ದಾವೆ ಸಲ್ಲಿಸಲು ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಲು ನನ್ನ ಮಾವನವರು ಮಾಹಿತಿ ನೀಡಿರುತ್ತಾರೆ.

9. ದಾವೆಯಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿರುತ್ತದೆ. ದಾವೆ ಸಲ್ಲಿಸಲು ನಾನು ಮತ್ತು ನಮ್ಮ ಮಾವನವರು ಸೇರಿ ಮಾಹಿತಿ ನೀಡಿರುತ್ತೇವೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯಿಂದ ಹಣ ಪಡೆದುಕೊಳ್ಳುವಾಗ ನಾನು ಮತ್ತು ನನ್ನ ಗಂಡ ಸೇರಿಯೆ ಮಾತನಾಡಿಕೊಂಡು ಹಣ ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ನೋಂದಣಿ ಕಛೇರಿಗೆ ನಾನು ಮತ್ತು ನನ್ನ ಗಂಡ ಹೋಗಿರುತ್ತೇವೆ. ನನಗೆ ಮೋಸ ಮಾಡಿಕೊಂಡ ಪತ್ರ ಖರೀದಿ ಪತ್ರವಾಗಿರುತ್ತದೆ. ನಾನು ಮಾಡಿದ ಸಹಿ ನೋಂದ ಪತ್ರ ಆಗಿದ್ದು, ನಾನು ಪತ್ರವನ್ನು ತಿಳಿದುಕೊಂಡು ಸಹಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

10. ನೋಂದಣಿ ಕಛೇರಿಯಿಂದ ಎಷ್ಟು ನಮೂನಿಯ ಕಾಗದ ಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಮಾವನವರಿಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನೋಂದಣಿ ಕಛೇರಿಗೆ ಬರುವ ಮುಂಚೆ ಮನೆಯಲ್ಲಿ ಹಣವನ್ನು ನೀಡಿರುತ್ತಾರೆ. ಕಛೇರಿಗೆ ಬಂದ ನಂತರ ಪ್ರತಿವಾದಿಯಿಂದ ಆಗಲಿ ಅಥವಾ ಆತನ ತಮ್ಮನಿಂದ ಯಾವುದೇ ಹಣ ಪಡೆದುಕೊಂಡಿಲ್ಲ. 1ನೇ ಪ್ರತಿವಾದಿಯು RTGS ಮೂಲಕ ನನ್ನ ಗಂಡನ ಖಾತೆಗೆ ಹಣ ವರ್ಗಾಯಿಸಿದ ಬಗ್ಗೆ ನನಗೆ ಗೊತ್ತಿಲ್ಲ.

11. 1ನೇ ಪ್ರತಿವಾದಿಯಿಂದ ನಾನು ಮತ್ತು ನನ್ನ ಗಂಡ ಸೇರಿ 10 ಲಕ್ಷ ರೂಪಾಯಿಗಳಿಗೆ ಖರೀದಿ ವ್ಯವಹಾರ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವ್ಯವಹಾರದ ಪ್ರಕಾರ 50,000/- ಸಂಚಗಾರ ಅಂತ 1ನೇ ಪ್ರತಿವಾದಿಯು ನೀಡಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು 9,50,000/- ಗಳನ್ನು RTGS ಮೂಲಕ ನನ್ನ ಗಂಡನ ಖಾತೆಗೆ ಹಣ ವರ್ಗಾವಣೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಣ ವರ್ಗಾವಣೆ ಆದ ನಂತರ ನೋಂದಣಿ ಕಛೇರಿಗೆ ಬಂದಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಿನ ನೋಂದಣಿ ಆಗಿರುವುದಿಲ್ಲ ಎಂದರೆ ಸಾಕ್ಷಿಯು ನಾನು ನೋಂದಣಿ ಕಛೇರಿಗೆ ಹೋಗಿಲ್ಲ ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ನಾನು ಒಂದು ಬಾರಿ ಮಾತ್ರ ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

12. ದಿಃ 31.12.2020 ರಂದು 1ನೇ ಪ್ರತಿವಾದಿಯು 2,00,000/- ಗಳನ್ನು RTGS ಮೂಲಕ ನನ್ನ ಗಂಡನ ಖಾತೆಗೆ ಹಣ ವರ್ಗಾವಣೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.ದಿಃ 11.01.2021 ರಂದು 1ನೇ ಪ್ರತಿವಾದಿಯು 2,50,000/- ಗಳನ್ನು RTGS ಮೂಲಕ ನನ್ನ ಗಂಡನ ಖಾತೆಗೆ ಹಣ ವರ್ಗಾವಣೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 15.01.2021 1ನೇ ಪ್ರತಿವಾದಿಯು 5,00,000/- ಗಳನ್ನು RTGS ಮೂಲಕ ನನ್ನ ಗಂಡನ ಖಾತೆಗೆ ಹಣ ವರ್ಗಾವಣೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಒಟ್ಟು 10,00,000/- ನಮಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ.

13. ದಿಃ 08.01.2021 ರಂದು 1ನೇ ಪ್ರತಿವಾದಿಗೆ ಖರೀದಿ ಹಾಕಿಕೊಡಬೇಕೆಂದು ನೋಂದಣಿ ಕಛೇರಿಗೆ ಬಂದಿರುತ್ತೇವೆ ಎಂದರೆ ಸಾಕ್ಷಿಯು ಕಛೇರಿಗೆ ಖರೀದಿ ಮಾಡಿಕೊಡಲು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನ ನಾವು ಕಛೇರಿಗೆ ಹೋಗಿರುತ್ತೇವೆ, ನೋಂದಣಿ ಆಗಿರುವುದಿಲ್ಲ ಎಂದರೆ ಸಾಕ್ಷಿಯು ನಾವು ಕಛೇರಿಗೆ ಹೋಗಿರುತ್ತೇವೆ ಹಣದ ಭದ್ರತೆಗಾಗಿ ದಾಖಲಾತಿಗಳಿಗೆ ಸಹಿ ಮಾಡಲು ಕಛೇರಿಗೆ ಹೋಗಿದ್ದು, ಸಹಿ ಮಾಡಿ ಬಂದಿರುತ್ತೇವೆ ಎಂದು ನುಡಿಯುತ್ತಾರೆ.

14. ದಿಃ 08.01.2021 ರಂದು ಖರೀದಿ ಪತ್ರ ನೋಂದಣಿ ಆಗಿಲ್ಲದ ಕಾರಣ, ಒಟ್ಟು ಮುಕ್ತಿಯಾರ ಪತ್ರವನ್ನು 1ನೇ ಪ್ರತಿವಾದಿಗೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಿಃ 08.01.2021 ರಂದು ಮಾಡಿಕೊಟ್ಟ ಒಟ್ಟು ಮುಕ್ತಿಯಾರ ಪತ್ರದ ಆಧಾರದ ಮೇರೆಗೆ ದಿಃ 19.08.2021 ರಂದು 1ನೇ ಪ್ರತಿವಾದಿಯು ಖರೀದಿ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅವರೆ ಮಾಡಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

15. 1ನೇ ಪ್ರತಿವಾದಿಯ ಜೊತೆ ದಾಖಲಾತಿ ನೋಂದಣಿ ಮಾಡಿಕೊಡುವ ಸಮಯದಲ್ಲಿ ಹೊರತುಪಡಿಸಿ ಬೇರೆ ಸಮಯದಲ್ಲಿ ಕಛೇರಿಗೆ ಭೇಟಿ ನೀಡಿರುವುದಿಲ್ಲ. 1ನೇ ಪ್ರತಿವಾದಿಯ ಜೊತೆ ಯಾವುದೇ ಕಛೇರಿಗೆ ಮನೆಯ ಜಿ.ಪಿ.ಎಸ್ ಮಾಡಲು ಹೋಗಿರುತ್ತೇನೆ ಎಂದು ನಮೂದಿಸಿರುವುದಿಲ್ಲ. ಸದರಿ ವಿಷಯ ನಾನು ಹೇಳಿ ಬರೆಸಿರುವುದಿಲ್ಲ. 1ನೇ ಪ್ರತಿವಾದಿಯ ನಮ್ಮ ಮನೆಯ ಜಿ.ಪಿ.ಎಸ್ ಮಾಡಿಕೊಡುತ್ತೇನೆ ಎಂದು ಖೊಟ್ಟಿಯಾಗಿ ಕಾಗದ ಪತ್ರಗಳನ್ನು ಬರೆಸಿಕೊಂಡಿರುತ್ತಾನೆ ಎಂದು ಹೇಳಿ ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ.

16. ನನಗೆ ಖರೀದಿ ಪತ್ರ, ಹಿಸಾರ ಪತ್ರ ಮತ್ತು ಒಟ್ಟು ಮುಕ್ತಿಯಾರ ಪತ್ರ ಯಾವುದು ಎಂದು ನನಗೆ ಗೊತ್ತಾಗುವುದಿಲ್ಲ. ಸಾಮಾನ್ಯವಾಗಿ ವ್ಯವಾಹರದ ಬಗ್ಗೆ ನೋಂದಣಿ ಕಛೇರಿಯ ಅಧಿಕಾರಿಗಳ ಎರಡು ಪಾರ್ಟಿಗಳಿಗೆ ತಿಳಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೂ ಮತ್ತು 1ನೇ ಪ್ರತಿವಾದಿಗೂ ಮಾರಾಟ ಮಾಡುವ, ಮಾರಟ ತೆಗೆದುಕೊಳ್ಳುವ ಬಗ್ಗೆ ನೋಂದಣಿ ಅಧಿಕಾರಿಗಳು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ 19.08.2021 ಖರೀದಿ ಆದ ಬಗ್ಗೆ 2 ತಿಂಗಳ ನಂತರ

ಗೊತ್ತಾಗಿರುತ್ತದೆ. ಸದರಿ ದಾವೆಯನ್ನು ಗೊತ್ತಾದ 1 ತಿಂಗಳ ನಂತರ ಸಲ್ಲಿಸಿರುತ್ತೇವೆ. ಯಾವುದೆ ವ್ಯವಹಾರವಿಲ್ಲದ ಹಣ ವರ್ಗಾವಣೆ ಮಾಡುವುದಿಲ್ಲ ಎಂದರೆ ಸರಿ. 1ನೇ ಪ್ರತಿವಾದಿಯು ನನ್ನ ಗಂಡನ ಖಾತೆಗೆ 9,50,000/- ವರ್ಗಾವಣೆ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಹಣ ವರ್ಗಾವಣೆಯಾದ ನಂತರ ನಾನು ಮತ್ತು ನನ್ನ ಗಂಡ ಖರೀದಿ ಹಾಕಿಕೊಡಲು ನೋಂದಣಿ ಕಛೇರಿಗೆ ಬಂದಿರುತ್ತೇವೆ ಎಂದರೆ ಸರಿಯಲ್ಲ.

17. 1ನೇ ಪ್ರತಿವಾದಿಯು ನಮ್ಮ ಒಪ್ಪಿಗೆಯ ಮೇರೆಗೆ ಒಟ್ಟು ಮುಕ್ತಿಯಾರ ಪತ್ರವನ್ನು ಕಾನೂನು ಪ್ರಕಾರ ಮಾಡಿಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಕಾನೂನು ಪ್ರಕಾರ ಒಟ್ಟು ಮುಕ್ತಿಯಾರ ಪತ್ರವನ್ನು 1ನೇ ಪ್ರತಿವಾದಿಯು ಖರೀದಿ ಪತ್ರವನ್ನು ಮಾಡಿಕೊಂಡಿರುತ್ತಾನೆ ಎಂದರೆ ಸರಿ, ಸಾಕ್ಷಿ ಮುಂದುವರೆದು ನನ್ನ ಸಹಿಯನ್ನು ಪಡೆದುಕೊಂಡಿಲ್ಲ, ನನಗೆ ಮಾಹಿತಿ ತಿಳಿಸಿಲ್ಲ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ನೀಡಿದ 10,00,000/- ಹಣವನ್ನು ಮುಳುಗಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**